**<u>OS No:331/2024</u>**

**PW-1**

**ಸಾಕ್ಷಿಯನ್ನು ದಿಃ 15.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಮುದರೆದ ಮುಖ್ಯ ವಿಚಾರಣೆಃ</u> ವಾದಿ ಪರ ಶ್ರೀ ಎಎಂಅರ್ ವಕೀಲರಿಂದಃ**

ನಾನು ಕೆಲವು ದಾಖಲಾತಿಗಳನ್ನು ಹಾಜರು ಪಡಿಸಿದ್ದು, ಅವುಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ.

1. ದಿಃ 04.02.2015 ರ ಶುದ್ಧ ಕ್ರಯಪತ್ರ ಹಾಜರು ಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು.

2. ದಿಃ 20.06.2023 ರ ಕ್ರಯದ ಕರಾರುಪತ್ರ ಹಾಜರು ಪಡಿಸಿದ್ದು ಅದನ್ನು ನಿಪಿ- 2 ಎಂದು ಗುರುತಿಸಲಾಯಿತು. ಸದರಿ ದಾಖಲಾತಿಗೆ ಶಿವ, ಬಾಬು, ಮುನಿರತ್ನ ರವರು ತಮ್ಮ ಸಹಿಗಳನ್ನು ಹಾಕಿರುತ್ತಾರೆ . ಸಾಕ್ಷಿಂದುವರು ಸದರಿ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

3. ಇ-ಖಾತಾ ಹಾಜರು ಪಡಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು.

4. ಆಸ್ತಿ ತೆರಿಗೆ ರಿಜಿಸ್ಟರ್ ಪ್ರತಿಯನ್ನು ಹಾಜರು ಪಡಿಸಿದ್ದು ಅದನ್ನು ನಿಪಿ-4 ಎಂದು ಗುರುತಿಸಲಾಯಿತು.

5. ವಕೀಲರ ಮುಖಾಂತರ ನೀಡಿರುವ ನೋಟೀಸ್ ನ ಕಚೇರಿ ಪ್ರತಿ ಹಾಜರು ಪಡಿಸಿದ್ದು ಅದನ್ನು ನಿಪಿ-5 ಎಂದು ಗುರುತಿಸಲಾಯಿತು.

6. ಅಂಚೆ ರಸೀದಿಗಳನ್ನು ಮೂರು ಹಾಜರು ಪಡಿಸಿದ್ದು ಅದನ್ನು ನಿಪಿ-6 ಎಂದು ಗುರುತಿಸಲಾಯಿತು.

7. ಮೂರು ಅಂಚೆ ಸ್ವೀಕೃತಿಗಳನ್ನು ಒಟ್ಟಾರೆಯಾಗಿ ಹಾಜರು ಪಡಿಸಿದ್ದು ಅದನ್ನು ನಿಪಿ-7 ಎಂದು ಗುರುತಿಸಲಾಯಿತು.

**ಪ್ರತಿವಾದಿ ಪರ ವಕೀಲರ ಗೈರು ಹಾಜರಿದ್ದು ಪಾಟೀ ಸವಾಲಿಗೆ ಸಕಾರಣ ಇಲ್ಲ ದ ಕಾರಣ ಹಾಗೂ ಪ್ರತಿವಾದಪತ್ರ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಸುಕೀತಾ ಎಸ್ ಹದ್ಲಿ)**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ

**ಸಾಕ್ಷಿಯನ್ನು ದಿಃ 15.04.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಎಂಅರ್ ವಕೀಲರಿಂದಃ**

ಸದರಿ ದಾವೆಯಲ್ಲಿ ನಾನು ವಾದಿ ಆಗಿರುತ್ತೇನೆ. ಈಗ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ನ್ಯಾಯಾಲಯಕ್ಕೆ ಸಲ್ಲಿಸುತ್ತಿದ್ದೇನೆ. ಹಾಗೂ ಅದರಲ್ಲಿ ಬರೆದಿರುವ ಎಲ್ಲಾ ಅಂಶಗಳು ನನಗೆ ತಿಳಿದಿರುತ್ತವೆ ಮತ್ತು ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ನಾನು ಅದಕ್ಕೆ ಸಹಿಯನ್ನು ಹಾಕಿರುತ್ತೇನೆ. ಸಾಕ್ಷಿಯು ನಿಪಿ-2 ಹಾಗೂ ಅದರಲಿಲರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-2 ರಲ್ಲಿರುವ ಪ್ರತಿವಾದಿಯ ಸಹಿಗಳನ್ನು ನೋಡಿ ಗುರುತಿಸಿರುತ್ತಾರೆ.

**ಪ್ರತಿವಾದಿ ಪರ ವಕೀಲರ ಗೈರು ಹಾಜರಿದ್ದು ಪಾಟೀ ಸವಾಲಿಗೆ ಸಕಾರಣ ಇಲ್ಲ ದ ಕಾರಣ ಹಾಗೂ ಪ್ರತಿವಾದಪತ್ರ ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**sd/-**

**(ಸುಕೀತಾ ಎಸ್ ಹದ್ಲಿ)**

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ